ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿ.ಸಿ. ನಂಃ **28/2025**

ಸಿ ಡಬ್ಲ್ಯೂಃ– 01/ಪಿ ಡಬ್ಲ್ಯೂ ಃ-01

| | |
|---|---|
| ಸಾಕ್ಷಿದಾರರ ಹೆಸರು | ಃ ನಿರಂಜನ ಗೌಡ ಬಿ ಎಸ್ |
| ತಂದೆಯ ಹೆಸರು | ಃ ಶಂಕರಗೌಡ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ಪಿ ಎಸ್ ಐ, ಎನ್ ಆರ್ ಪುರ ಪೊಲೀಸ್ ಠಾಣೆ |
| ವಾಸಸ್ಥಳ | ಃ ನ ರಾ ಪುರ |

ದಿನಾಂಕಃ **20/01/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ 23/11/2023 ರಿಂದ ಇಲ್ಲಿಯವರೆಗೆ ಎನ್ ಆರ್ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಾ ಇರುತ್ತೇನೆ.

ದಿನಾಂಕಃ 14/06/2025 ರಂದು ಮ.12.00 ಗಂಟೆ ಸುಮಾರಿಗೆ ಚಾಸಾ 6 ರಿಂದ 8 ರವರೊಂದಿಗೆ ಇಲಾಖಾ ಜೀಪಿನಲ್ಲಿ ರೌಂಡ್ ಕರ್ತವ್ಯದಲ್ಲಿದ್ದಾಗ ಮ.1.30 ಗಂಟೆಗೆ ಬಾತ್ಮಿದಾರರು ದೂರವಾಣಿ ಕರೆ ಮಾಡಿದ್ದು, ಒಂದು ಕ್ಯಾರಿ ಗೂಡ್ಸ್ ವಾಹನದಲ್ಲಿ ದನವನ್ನು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ತುಂಬಿಕೊಂಡು ಶಿವಮೊಗ್ಗದ ಕಡೆಗೆ ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ್ದು, ನಂತರ ನಾನು ಠಾಣೆಗೆ ಫೋನ್ ಮಾಡಿ ಚಾಸಾ 4 ಮತ್ತು 5 ರವರಿಗೆ ಮೆಣಸೂರು ಸರ್ಕಲ್ ಹತ್ತಿರ ಬರುವಂತೆ ತಿಳಿಸಿದ್ದು ನಂತರ 2.00 ಗಂಟೆ ಸುಮಾರಿಗೆ ಮೆಣಸೂರ್ ಸರ್ಕಲ್ ತಲುಪಿ ಅಲ್ಲೇ ಇದ್ದ ಚಾಸಾ 2 ಮತ್ತು 3 ರವರಿಗೆ ಘಟನೆ ಬಗ್ಗೆ ಮಾಹಿತಿ ತಿಳಿಸಿ ಅವರು ಪಂಚರಾಗಿ ಒಪ್ಪಿಕೊಂಡ ಮೇರೆಗೆ ಅವರಿಗೆ ಲಿಖಿತ ಪೊಲೀಸ್ ನೋಟೀಸ್ ಜಾರಿ ಮಾಡಿ ನಂತರ ಅವರನ್ನು ಮ.2.15 ಗಂಟೆಗೆ ನಮ್ಮ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಸೌತಿಕೆರೆ ಸರ್ಕಲ್ ತಲುಸಿದ್ದು ಸುಮಾರು 2.30 ಸುಮಾರಿಗೆ ಕುದುರೆಗುಂಡಿ ಕಡೆಯಿಂದ ಒಂದು ಸೂಪರ್ ಕ್ಯಾರಿ ಗೂಡ್ಸ್ ವಾಹನ ಬಂದಿದ್ದು ಸದರಿ ವಾಹನವನ್ನು ಪಂಚರ ಹಾಗೂ ನಮ್ಮ ಸಿಬ್ಬಂದಿಯ ಸಹಾಯದಿಂದ ನಿಲ್ಲಿಸಿ ನೋಡಲಾಗಿ ಅದರ ನೋಂದಣಿ ನಂಃ ಕೆಎ 18 ಸಿ 5499 ಇದ್ದು, ನಂತರ ಸದರಿ ವಾಹನವನ್ನು ಪರಿಶೀಲಿಸಲಾಗಿ ಸದರಿ ವಾಹನದಲ್ಲಿ ದನಗಳು ಇರುವುದು ಕಂಡುಬಂದಿದ್ದು, ಅದರ ಚಾಲಕನ ಹೆಸರು, ವಿಳಾಸ ಕೇಳಲಾಗಿ ಚಾಲಕನ ಹೆಸರು ಜಾಫಿರ್ ಸಾದಿಕ್ ಎಂದು ತಿಳಿಸಿದ್ದು, ಇನ್ನೊಬ್ಬ ವ್ಯಕ್ತಿಯ ಬಗ್ಗೆ ಕೇಳಲಾಗಿ ಆತನು ತನ್ನ ಹೆಸರನ್ನು ಚಂದ್ರು ಎಂದು ತಿಳಿಸಿರುತ್ತಾರೆ. ಬಳಿಕ ವಾಹನದ ಹಿಂಭಾಗವನ್ನು ಪರಿಶೀಲಿಸಲಾಗಿ 3 ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿರುವುದು ಕಂಡುಬಂದಿರುತ್ತದೆ. ಸದರಿಯವರಿಗೆ ಜಾನುವಾರುಗಳನ್ನು ಸಾಗಿಸಲು ಪರವಾನಗಿ ಇದೆಯಾ ಎಂಬುದರ ಬಗ್ಗೆ ಕೇಳಲಾಗಿ ಅವರು ಯಾವುದೇ ಪರವಾನಗಿ ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಸದರಿ

ದನಗಳನ್ನು ಪರಿಶೀಲಿಸಲಾಗಿ ಅದರಲ್ಲಿ ಒಂದು ದನ ಕಂದು ಬಣ್ಣದ ಸುಮಾರು 8 ವರ್ಷದ ದನವಾಗಿರುತ್ತದೆ. ಇನ್ನೊಂದು 4 ತಿಂಗಳ ಕಂದು ಬಣ್ಣದ ಹೆಣ್ಣು ಕರು ಇದ್ದು, ಇನ್ನೊಂದು ಒಂದು ವರ್ಷದ ಕಪ್ಪು ಬಣ್ಣದ ಹೆಣ್ಣು ಕರು ಇದ್ದು, ಇವುಗಳ ಅಂದಾಜು ಮೌಲ್ಯ 6 ಸಾವಿರ ರೂ. ಇರುವುದಾಗಿ ತಿಳಿಸಿರುತ್ತಾರೆ.

2. ಸದರಿ ದನಗಳನ್ನು ಆರೋಪಿತರು ಕೊಪ್ಪ ತಾಲ್ಲೂಕಿನ ತಲಮಕ್ಕಿ ಗ್ರಾಮದ ಸುರೇಶ್ ನಾಯಕ್ ಎನ್ನುವವರಿಂದ ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿಯವರು ಯಾವುದೇ ಪರವಾನಗಿ ಇಲ್ಲದೇ ಹಿಂಸಾತ್ಮಕವಾಗಿ ಹಸುಗಳನ್ನು ತುಂಬಿಕೊಂಡು ಸಾಗಾಣಿಕೆ ಮಾಡಿದ್ದರು. ಸದರಿ ವಾಹನ, ಜಾನುವಾರು ಮತ್ತು ಆರೋಪಿತರನ್ನು ವಶಕ್ಕೆ ಪಡೆದಿರುತ್ತೇನೆ ಹಾಗೂ ಮ. 2.45 ರಿಂದ 3.30 ವರೆಗೆ ಪಂಚರ ಸಮಕ್ಷಮ ಮಹಜರ್ ಮಾಡಿ, ಭಾವಚಿತ್ರಗಳನ್ನು ತೆಗೆದು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಸಂಜೆ 4.00 ಗಂಟೆಗೆ ಠಾಣೆಗೆ ತೆಗೆದುಕೊಂಡು ಬಂದು ವರದಿ ನೀಡಿರುತ್ತೇನೆ.

3. ಸಾಕ್ಷಿಯು ತಾವು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ದಿಃ 14/06/2025 ರಂದು ಮಾಡಿದ ಕೃತ್ಯ ಸ್ಥಳ ಹಾಗೂ ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯ್ತು. ಸಾಕ್ಷಿಯು ನಿಪಿ 2 ಅನ್ನು ಮಾಡುವ ಕಾಲಕ್ಕೆ ತೆಗೆದ ಎರಡು ಭಾವಚಿತ್ರಗಳನ್ನು ಹಾಗೂ ಒಂದು ಪೆನ್ ಡ್ರೈವ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 5 ಎಂದು ಗುರುತಿಸಲಾಯ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಆ ದಿನ ಆರೋಪಿತರು ಬಳಸಿದ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ವಿ ಎಸ್ ವಕೀಲರಿಂದಃ

ನನಗೆ ಬಾತ್ಮಿದಾರರಿಂದ ಮಾಹಿತಿ ಬಂದಾಗ ನಾನು ದೀಪ್ತಿ ಸರ್ಕಲ್, ಎನ್ ಆರ್ ಪುರದಲ್ಲಿ ಇದ್ದೆನು. ದೀಪ್ತಿ ಸರ್ಕಲ್ ಬಳಿ ಮೂರು ರಸ್ತೆಗಳು ಕೂಡುತ್ತವೆ ಎಂದರೆ ಸರಿ. ದೀಪ್ತಿ ಸರ್ಕಲ್ ನಿಂದ ಕೊಪ್ಪ ಕಡೆಗೆ ಹೋಗುವ 1 ಕಿ.ಮೀ. ದೂರದಲ್ಲಿ ಹೋದರೆ ಫಾರೆಸ್ಟ್ ಚೆಕ್ ಪೋಸ್ಟ್ ಇರುತ್ತದೆ ಎಂದರೆ ಸರಿ. ನಾನು ಫಾರೆಸ್ಟ್ ಚೆಕ್ ಪೋಸ್ಟ್ ರವರಿಗೆ ವಾಹನದಲ್ಲಿ ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಅದನ್ನು ತಡೆದು ನಿಲ್ಲಿಸುವಂತೆ ಮಾಹಿತಿ ಕೊಟ್ಟಿರುವುದಿಲ್ಲ. ದೀಪ್ತಿ ಸರ್ಕಲ್ ಬಳಿ ಸಾಕಷ್ಟು ಅಂಗಡಿಗಳು, ವಾಸದ ಮನೆಗಳು ಇರುವ ಪ್ರದೇಶ ಎಂದರೆ ಸರಿ. ದೀಪ್ತಿ ಸರ್ಕಲ್ ಬಳಿ ನಾನು ವಾಹನಗಳನ್ನು ತಡೆದು ತಪಾಸಣೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಲ್ಲಿಂದ ಗುಬ್ಬಿಗ ಮತ್ತು ಸೌತಿಕೆರೆ ಮುಖಾಂತರ ಶಿವಮೊಗ್ಗ ಕಡೆಗೆ ಹೋಗಲು ರಸ್ತೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು

ಮಹಜರಿನಲ್ಲಿ ಈ ರೀತಿ ಅವರು ಸೌತಿಕೆರೆ -ಗುಬ್ಬಿಗ ಮಾರ್ಗವಾಗಿ ಬರುತ್ತಾರೆ ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

2. ನಿಪಿ 2 ರ ಪಂಚನಾಮೆಯ ಸಾಕ್ಷಿದಾರರು ಒಬ್ಬರು ದೀಪ್ತಿ ಸರ್ಕಲ್ ಬಳಿ ಇರುವವರು, ಮತ್ತೊಬ್ಬರು ಎನ್ ಆರ್ ಪುರ ಆಟೋ ಚಾಲಕ ಸಂಘದ ಅಧ್ಯಕ್ಷ ಎಂದರೆ ಸರಿ. ಸದರಿ ಮಧುಸೂದನ್ ಎಂಬ ಪಂಚರ ಸಾಕ್ಷಿದಾರರು ಸಾಕಷ್ಟು ಪ್ರಕರಣಗಳಲ್ಲಿ ನಮ್ಮ ಠಾಣಾ ಸಾಕ್ಷಿದಾರರು ಇರುತ್ತಾರೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಾವು ಪಂಚ ಸಾಕ್ಷಿದಾರರು ದೀಪ್ತಿ ಸರ್ಕಲ್ ಬಳಿ ಸಿಕ್ಕಿದ್ದು ಅವರನ್ನು ಕರೆದುಕೊಂಡು ಹೋಗಿರುತ್ತೇವೆ. ನಾನು ಮಹಜರಿನಲ್ಲಿ ದೀಪ್ತಿ ಸರ್ಕಲ್ ಬಳಿ ಇದ್ದ ಪಂಚರನ್ನು ಕರೆದುಕೊಂಡು ಹೋಗಿರುವುದಾಗಿ ಹೇಳಿರುತ್ತೇನೆ. ಪಂಚರಿಗೆ ನೀಡಿದ ನೋಟೀಸಿನಲ್ಲಿ ನೀವು ಇಂತಹ ಜಾಗದಲ್ಲಿದ್ದು, ಇಂತಹ ಸಮಯಕ್ಕೆ, ನೀವು ಇಂತಹ ಜಾಗಕ್ಕೆ ಬರಬೇಕು ಎಂದು ತಿಳಿಸಿಲ್ಲ ಎಂದರೆ ಸರಿ.

3. ಸೌತಿಕೆರೆ ಸರ್ಕಲ್ ಸುತ್ತಲು ಅಂಗಡಿ ಮತ್ತು ಮನೆಗಳು ಇರುತ್ತವೆ ಎಂದರೆ ಸರಿ. ಸೌತಿಕೆರೆ ಸರ್ಕಲ್ ನಲ್ಲಿ ವಾಸವಿದ್ದವರನ್ನು ನಾನು ಪಂಚನಾಮೆ ಮಾಡುವ ಕಾಲಕ್ಕೆ ಕರೆದಿರುವುದಿಲ್ಲ ಎಂದರೆ ಸರಿ. ನಿಪಿ 3 ರಲ್ಲಿ ನಾನು ಹೇಳಿದ ರೀತಿ ಜಾನುವಾರುಗಳು ಕಾಣುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 3 ಮತ್ತು 4 ರಲ್ಲಿ ಯಾವ ದಿನಾಂಕ ಮತ್ತು ಯಾವ ಸಮಯಕ್ಕೆ ಛಾಯಾಚಿತ್ರ ತೆಗೆಯುತ್ತಿದ್ದೇವೆ ಎಂಬುದರ ಬಗ್ಗೆ ಕಾಣುತ್ತಿಲ್ಲ ಎಂದರೆ ಸರಿ. ಸೌತಿಕೆರೆ ಸರ್ಕಲ್ ನ ರಸ್ತೆಯಲ್ಲಿ ರಸ್ತೆ ವಿಭಜಿಸುವ ಬಗ್ಗೆ ರಸ್ತೆಯ ಮದ್ಯದಲ್ಲಿ ಯಾವುದೇ ಬಿಳಿ ಬಣ್ಣದಿಂದ ಲೈನ್ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಪರಿಶೀಲಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸೌತಿಕೆರೆ ಸರ್ಕಲ್ ಬಳಿ ಮೂರು ರಸ್ತೆಗಳು ಕೂಡುತ್ತವೆ ಎಂದರೆ ಸರಿ. ಮಹಜರಿನಲ್ಲಿ ಸೌತಿಕೆರೆ ಸರ್ಕಲ್ ನ ಯಾವ ರಸ್ತೆಯ ಬಳಿ ಫೋಟೋ ತೆಗೆದಿರುತ್ತೇವೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಕ್ಷೆಯಲ್ಲಿ ತೋರಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

4. ನಾವು ಆ ದಿನ ಒಟ್ಟು 5 ಜನ ನಮ್ಮ ಸಿಬ್ಬಂದಿಯವರು ದಾಳಿಗೆ ಹೋಗಿದ್ದೆವು. ಮಹಜರ್ ಮತ್ತು ದಾಳಿಗೆ ಹೋಗುವ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದು ನನಗೆ ನೆನಪಿಲ್ಲ. ಜಾನುವಾರುಗಳು ಕಳ್ಳತನ ಆಗಿರುತ್ತದೆ ಎಂಬ ಬಗ್ಗೆ ಯಾರು ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಜಾನುವಾರುಗಳನ್ನು ಅಮಾನತ್ತುಪಡಿಸಿಕೊಳ್ಳುವ ಕಾಲಕ್ಕೆ ಸುರೇಶ ನಾಯಕರವರ ಬಳಿ ಹೋಗಿ ಈ ವಿಚಾರದ ಬಗ್ಗೆ ವಿಚಾರಿಸಿರುವುದಿಲ್ಲ. ನನಗೆ ಜಾನುವಾರುಗಳನ್ನು ಸಾಗಾಣಿಕೆ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು, ನಾನು ಸ್ಥಳಕ್ಕೆ ಹೋಗಿ ಆರೋಪಿತರನ್ನು ಹಾಗೂ ಜಾನುವಾರುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಂಡು ಛಾಯಾಚಿತ್ರ ಮತ್ತು ನಕಾಶೆಯನ್ನು ತಯಾರಿಸಿರುತ್ತೇನೆ

ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.ನಮ್ಮ ಠಾಣಾ ಅಂಕಿಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆ ಮಾಡಿರುವುದಿಲ್ಲಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ ಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ